2.	ಚಿಕ್ಕಮಗಳೂರು	78,550
3.	ಹಾಸನ	2,91,000
4.	ಕೋಲಾರ	39,750
5.	ಮಂಗಳೂರು	1,61,750
6.	ಕಾರವಾರ	65,250
7.	ಮಂಡ್ಯ	7,42,500
8.	ತುಮಕೂರು	5,95,000
9.	ಶಿವಮೊಗ್ಗ	1,15,500

ಇ) ಮಾಗಡಿ ತಾಲ್ಲೂಕಿನಲ್ಲಿ 241 ವಿದ್ಯಾರ್ಥಿನಿಯರು ಉಪಯೋಗ ಪಡೆದಿದ್ದಾರೆ. ರೂ.90,500ಗಳನ್ನು ವಿತರಣೆ ಮಾಡಲಾಗಿದೆ.

ವಿಷಯ :- ನೆಲಮಂಗಲ ಟೌನ್‌ಗೆ ಕುಡಿಯುವ ನೀರು ಸರಬರಾಜು ಮಾಡಲು ಮಂಚನ ಬೆಲೆ ಯೋಜನೆ.

Q:530

ಶ್ರೀ ಆಂಜನಾಮೂರ್ತಿ (ನೆಲಮಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ಟೌನಿಗೆ ಕುಡಿಯುವ ನೀರು ಸರಬರಾಜು ಮಾಡಲು (ಮಂಚನಬೆಲೆ ಯೋಜನೆಯಿಂದ) ನೀಲಿನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಕೂಡಲೇ ಅದಕ್ಕೆ ಮಂಜೂರಾತಿ ನೀಡಿ ಟೌನಿನ ಜನತೆಗೆ ಕುಡಿಯುವ ನೀರನ್ನು ಸರಬರಾಜು ಮಾಡುವರೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಮಂಚನಬೆಲೆ ಯೋಜನೆಯನ್ನು ಪರೀಕ್ಷಿಸಲಾಗಿ ಆರ್ಥಿಕವಾಗಿ ಸಾಧ್ಯವಿಲ್ಲದೇ ಇರುವುದರಿಂದ ಬೇರೆ ಮೂಲಗಳಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ತನಿಖೆ ನಡೆಸಲಾಗುತ್ತಿದೆ.

ವಿಷಯ :- ಕೊಳ್ಳೇಗಾಲದ ತಾಲ್ಲೂಕು ಹಳೆ ಹಂಪಾಪುರಕ್ಕೆ ಸೇರಿದ ಸರ್ವೆ ನಂಬರ್ 357ನೇ ಜಮೀನಿನಲ್ಲಿ ಮರಳು ಸಾಗಿಸುವುದನ್ನು ನಿಲ್ಲಿಸುವ ಬಗ್ಗೆ.

Q:1331

ಶ್ರೀ ಆಂಜನಾಮೂರ್ತಿ (ನೆಲಮಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಳ್ಳೇಗಾಲದ ತಾ : ಕಾವೇರಿ ನದಿಯ ಪ್ರವಾಹ ಪೀಡಿತ ಪ್ರದೇಶವಾದ ಹಳೆ ಹಂಪಾಪುರ ಗ್ರಾಮದ 357 ಸರ್ವೆ ನಂಬರ್‌ನಲ್ಲಿ ಭೂಮಿಯಲ್ಲಿರುವ ಮರಳನ್ನು ಸಾಗಿಸಲು 1987ನೇ ಇಸವಿಯಲ್ಲಿ ಗುತ್ತಿಗೆಯನ್ನು ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಈ ಜಮೀನಿನಿಂದ ಮರಳನ್ನು ಸಾಗಿಸುವಾಗ ಲಾರಿಗಳ ಓಡಾಟದಿಂದ ರಸ್ತೆಯಿಂದ ಧೂಳು ಮೇಲೆದ್ದು ರೈತರ ಹಿಪ್ಪು ನೇರಳೆ ಬೆಳೆಗಳಿಗೆ ಬಿದ್ದು ಬೆಳೆ ಹಾಳಾಗುತ್ತಿದ್ದುದಲ್ಲದೆ, ಊರಿನ ಮನೆಗಳಿಗೆ ಧೂಳು ನುಗ್ಗುತ್ತಿದ್ದ ಕಾರಣ ಮರಳು ಸಾಗಿಸುವುದನ್ನು ಊರಿನ ಜನತೆ ಪ್ರತಿಭಟಿಸಿ ಸರ್ಕಾರದವರಿಗೆ ಮನವಿ ಸಲ್ಲಿಸಿದ್ದು ನಿಜವೇ?

ಇ) ಹಾಗಿದ್ದಲ್ಲಿ, ಅಂದಿನಿಂದ ನಿಲ್ಲಿಸಲಾಗಿದ್ದ ಮರಳು ಸಾಗಾಣಿಕೆಯನ್ನು 1993ನೇ ಇಸವಿ ಜನವರಿ ತಿಂಗಳಿನಿಂದ ಮತ್ತೆ ಸದರಿ ಸ್ಥಳದಿಂದ ಮರಳು ಸಾಗಿಸುತ್ತಿರುವುದಕ್ಕೆ ಕಾರಣಗಳೇನು?

ಈ) ಅಲ್ಲಿನ ಜನತೆಗೆ ಕಷ್ಟ ನಷ್ಟವುಂಟಾಗುತ್ತದೆ ಎಂದು ಗೊತ್ತಿದ್ದಾಗ್ಯೂ ಸಹ ಮತ್ತೆ ಅಲ್ಲಿಂದ ಮರಳು ಸಾಗಿಸಲು ಗುತ್ತಿಗೆ ನೀಡಿರುವ ಅಧಿಕಾರಿಗಳ ಮೇಲೆ ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೆ?

ಶ್ರೀ ಡಿ. ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) 24-6-1981ರಿಂದಲೇ ಈ ಪ್ರದೇಶದಲ್ಲಿ ಗುತ್ತಿಗೆ ನೀಡಿದ್ದು 23-6-86ರಲ್ಲಿ ಕೊನೆಗೊಂಡ ನಂತರ ಇದರಲ್ಲಿ ಸ್ವಲ್ಪ ಭಾಗವನ್ನು ಅಕ್ಟೋಬರ್ 1992ರಲ್ಲಿ ಮಂಜೂರು ಮಾಡಿದೆ.

ಆ) ನಿಜ., ಆದರೆ ಸದರಿ ಸ್ಥಳದಿಂದ ಮರಳು ತೆಗೆಯುವುದರಿಂದ ಈ ರೀತಿಯ ಯಾವುದೇ ಹಾನಿಯಾಗುವ ಸಾಧ್ಯತೆ ಇಲ್ಲವೆಂದು ಸ್ಥಳ ತನಿಖೆಯಿಂದ ದೃಢ ಪಟ್ಟಿದೆ.

ಇ) ಸದರಿ ಸ್ಥಳದಿಂದ ಮರಳು ಸಾಗಾಣಿಕೆ ನಿಂತಿರಲಿಲ್ಲ ಆಗಿಂದಾಗ್ಗೆ ನಡೆಯುತ್ತಿತ್ತು. ಸದರಿ ಸ್ಥಳದಲ್ಲಿ ಅನಧಿಕೃತವಾಗಿ ಮರಳು ಸಾಗಣೆಯಿಂದ ಉಂಟಾಗುತ್ತಿರುವ ರಾಜಧನ ನಷ್ಟ ತಪ್ಪಿಸಲು ಕೊಳ್ಳೇಗಾಲದ ತಹಶೀಲ್ದಾರರು ನೀಡಿದ ನಿರಾಪೇಕ್ಷಣ ಪತ್ರದ ಮೇರೆಗೆ ನಿಯಮಾನುಸಾರ ಗುತ್ತಿಗೆ ಮಂಜೂರು ಮಾಡಿರುವುದು ಸಮಂಜಸವಾಗಿರುತ್ತದೆ.

ಈ) ಉದ್ಭವಿಸುವುದಿಲ್ಲ.
ಕಷ್ಟ ನಷ್ಟಗಳೆಂದು ದೂರಿರುವ ವಿಷಯ ಸತ್ಯಕ್ಕೆ ದೂರವಾದುದೆಂದು ತನಿಖೆಗಳಿಂದ ತಿಳಿದು ಬಂದಿದೆ. ದ್ವೇಷಾಸೂಯೆಗಳಿಂದ ಈ ರೀತಿ ದೂರುತ್ತಿರುವುದು ಕಂಡು ಬಂದಿದೆ.

<u>ವಿಷಯ :- ಕರ್ನಾಟಕದಲ್ಲಿರುವ ಕಾರ್ಮಿಕ ನ್ಯಾಯಾಲಯಗಳ ಸಂಖ್ಯೆ.</u>

Q:1495

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಕರ್ನಾಟಕದಲ್ಲಿರುವ ಕಾರ್ಮಿಕ ನ್ಯಾಯಾಲಯಗಳೆಷ್ಟು?